# ಬಿಎಸ್‌ಎಸ್ ಮೈಕ್ರೋಫೈನಾನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು

## ಕೋರಿಕೆ ಪತ್ರ (CLAIM FORM) – ಶೋಕ ನಿವಾರಣಾ ನಿಧಿ (SNN)/ಗ್ರಾಹಕರ ವಿಮಾ ಖಾತೆ (CIA) Escrow ಖಾತೆಯಿಂದ ಹಣ ಪಡೆಯಲು:

| ಕ್ರಮ ಸಂ. | ಬಿಎಸ್‌ಎಸ್ ಸಣ್ಣ ಸಾಲ ಯೋಜನೆಯನ್ನು ಬಿಟ್ಟಿರುವ ಸದಸ್ಯಿನಿಯ ವಿವರಗಳನ್ನು, ಯೋಜನೆಯನ್ನು ಬಿಟ್ಟಿರುವ ಸದಸ್ಯಿನಿಯರು/ಕೋರಿಕೆದಾರರು ಭರ್ತಿಮಾಡುವುದು:<br>(ಈ ಕೋರಿಕೆ ಪತ್ರವನ್ನು ಭರ್ತಿ ಮಾಡುವುದಕ್ಕೂ ಮೊದಲು, ದಯವಿಟ್ಟು ಪುಟ ಸಂಖ್ಯೆ– 2 ರಲ್ಲಿ ನೀಡಿರುವ ಸೂಚನೆಗಳನ್ನು ಚೆನ್ನಾಗಿ ಓದಿ ಅರ್ಥಮಾಡಿಕೊಳ್ಳುವುದು) | | |
|---|---|---|---|
| 1 | **ಯೋಜನೆಯನ್ನು ಬಿಟ್ಟಿರುವ ಸದಸ್ಯಿನಿಯ ಹೆಸರು:**<br>(ಬಿಎಸ್‌ಎಸ್ ನಿಂದ ನೀಡಲಾಗಿದ್ದ ದಾಖಲೆಯಲ್ಲಿ ನಮೂದಿಸಿರುವಂತೆ) | | |
| 2 | **(a) ಕ್ರೆಡಿಟ್ಸ್ ID ಸಂಖ್ಯೆ:**<br>[ಬಿಎಸ್‌ಎಸ್ ಸಣ್ಣ ಸಾಲ ಯೋಜನೆಯಲ್ಲಿದ್ದಾಗ ನೀಡಲಾಗಿದ್ದ ಸದಸ್ಯಿನಿಯ ವಿಶಿಷ್ಟ ಗುರುತಿನ ಸಂಖ್ಯೆ (Unique ID No.)] | | **(b) FO-C-G-M No.:**<br>(ಬಿಎಸ್‌ಎಸ್ ಸಣ್ಣ ಸಾಲ ಯೋಜನೆಯಲ್ಲಿದ್ದಾಗ ನೀಡಲಾಗಿದ್ದ ಸದಸ್ಯಿನಿಯ ಗುರುತಿನ ಸಂಖ್ಯೆ) |
| 3 | **(a) ಗಂಡ/ಪೋಷಕರ ಹೆಸರು:**<br>(ಬಿಎಸ್‌ಎಸ್ ನಿಂದ ನೀಡಲಾಗಿದ್ದ ದಾಖಲೆಯಲ್ಲಿ ನಮೂದಿಸಿರುವಂತೆ) | | **(b) ಪೋಷಕರಾಗಿದ್ದಲ್ಲಿ, ಸಂಬಂಧ:** |
| 4 | **(a) ಯೋಜನೆಯನ್ನು ಬಿಟ್ಟಿರುವ ಸದಸ್ಯಿನಿ, ಬಿಎಸ್‌ಎಸ್ ಸಣ್ಣ ಸಾಲ ಯೋಜನೆಯಲ್ಲಿದ್ದಾಗ, ನೀಡಿದ್ದ ವಿಳಾಸದ ವಿವರ:** | | |
| | **(b) ಯೋಜನೆಯನ್ನು ಬಿಟ್ಟಿರುವ ಸದಸ್ಯಿನಿಯ ಪ್ರಸ್ತುತ ಪೂರ್ಣ ಅಂಚೆ ವಿಳಾಸ:**<br>(ಈ ಮೇಲಿನ ವಿಳಾಸವೇ ಆಗಿದ್ದಲ್ಲಿ, **"ಮೇಲಿನಂತೆ"** ಎಂದು ಬರೆಯುವುದು) | | |
| 5 | **ಸದಸ್ಯಿನಿಯ ಸಂಪರ್ಕಕ್ಕೆ ಮೊಬೈಲ್ ಸಂಖ್ಯೆ ಮತ್ತು E-mail ವಿಳಾಸ, ಇದ್ದಲ್ಲಿ:** | | |
| 6 | **(a) ಯೋಜನೆಯನ್ನು ಬಿಟ್ಟಿರುವ ಸದಸ್ಯಿನಿಯ ಹುಟ್ಟಿದ ದಿನಾಂಕ:**<br>(ತಿಳಿದಿದ್ದಲ್ಲಿ) | **(b) ವಯಸ್ಸು:** | **(c) ನೀವು ಬಿಎಸ್‌ಎಸ್ ಸಣ್ಣ ಸಾಲ ಯೋಜನೆಯಲ್ಲಿ ಅಂದಾಜು ಯಾವಾಗ ಸದಸ್ಯಿನಿಯಾಗಿದ್ದಿರಿ:**<br>(ಅಂದಾಜು ವರ್ಷ ಮತ್ತು ತಿಂಗಳನ್ನು ನಮೂದಿಸಿರಿ) |
| 7 | **(a) ಬಿಎಸ್‌ಎಸ್‌ನಿಂದ ವಿತರಿಸಲಾಗಿದ್ದ ದಾಖಲೆಯ ಹೆಸರು:**<br>(ಅದರ ಒಂದು ಪ್ರತಿಯನ್ನು ಈ ನಮೂನೆಯೊಂದಿಗೆ ಲಗತ್ತಿಸಬೇಕು) | | **(b) ಸದಸ್ಯಿನಿಯ ಇತ್ತೀಚಿನ ಭಾವಚಿತ್ರವುಳ್ಳ KYC ದಾಖಲೆಯ ಹೆಸರು:**<br>[KYC-Know Your Customer (ನಿಮ್ಮ ಗ್ರಾಹಕರನ್ನು ಅರಿಯಿರಿ)]<br>(ಅದರ ಒಂದು ಪ್ರತಿಯನ್ನು ಈ ನಮೂನೆಯೊಂದಿಗೆ ಲಗತ್ತಿಸಬೇಕು) |
| 8 | **ಒಂದು ವೇಳೆ ಯೋಜನೆಯನ್ನು ಬಿಟ್ಟಿರುವ ಸದಸ್ಯಿನಿ ಮರಣಹೊಂದಿದ್ದಲ್ಲಿ, ಕೋರಿಕೆದಾರರು ಮೇಲಿನ ಪಟ್ಟಿಯಲ್ಲಿರುವ ಎಲ್ಲಾ ಮಾಹಿತಿಗಳನ್ನು ನೀಡುವುದರ ಜೊತೆಗೆ, ಹೆಚ್ಚುವರಿಯಾಗಿ ಈ ಕೆಳಗಿನ ಪಟ್ಟಿಯಲ್ಲಿ ಕೇಳಿರುವ ಅವಶ್ಯ ಮಾಹಿತಿಗಳನ್ನು ನೀಡುವುದು:** | | |
| | **(a) ಕೋರಿಕೆದಾರರ ಹೆಸರು:** | | **(b) ಮೃತ ಸದಸ್ಯಿನಿಯೊಂದಿಗೆ ಸಂಬಂಧ:** |
| | **(c ) ಮೃತ ಸದಸ್ಯಿನಿಯ ಪರವಾಗಿ, ಪ್ರಸ್ತುತ ಕೋರಿಕೆ ಸಲ್ಲಿಸುತ್ತಿರುವ ವ್ಯಕ್ತಿಯ ಸಂಬಂಧವನ್ನು ರುಜುವಾತುಪಡಿಸುವ ದಾಖಲೆಯ ಹೆಸರು:**<br>(ಅದರ ಒಂದು ಪ್ರತಿಯನ್ನು ಈ ನಮೂನೆಯೊಂದಿಗೆ ಲಗತ್ತಿಸಬೇಕು) | | **(d) ಸದಸ್ಯಿನಿಯ ಮರಣ ಪ್ರಮಾಣ ಪತ್ರವನ್ನು ನೀಡಲಾಗಿದೆಯೇ:**<br>(ಮರಣ ಪ್ರಮಾಣ ಪತ್ರದ ಒಂದು ಪ್ರತಿಯನ್ನು ಈ ನಮೂನೆಯೊಂದಿಗೆ ಲಗತ್ತಿಸಬೇಕು) |
| | **(e) ಕೋರಿಕೆ ಸಲ್ಲಿಸುವವರ ಇತ್ತೀಚಿನ ಭಾವಚಿತ್ರವುಳ್ಳ KYC ದಾಖಲೆಯ ಹೆಸರು:**<br>(**KYC** ದಾಖಲೆಯ ಒಂದು ಪ್ರತಿಯನ್ನು ಈ ನಮೂನೆಯೊಂದಿಗೆ ಲಗತ್ತಿಸಬೇಕು) | | |

**ಘೋಷಣೆ:** ಈ ಮೇಲೆ ನೀಡಿರುವ ಎಲ್ಲಾ ಮಾಹಿತಿಗಳು ಸತ್ಯ ಎಂದು ನಾನು ಈ ಮೂಲಕ ಘೋಷಿಸುತ್ತಿದ್ದೇನೆ, ಹಾಗೂ ಜೊತೆಗೆ ನಾನು/ನಮ್ಮ ಕುಟುಂಬದ ಸದಸ್ಯಿನಿ ದಿನಾಂಕ 30ನೇ ಸೆಪ್ಟೆಂಬರ್ 2011 ಕ್ಕೂ ಮೊದಲು ಬಿಎಸ್‌ಎಸ್ ಸಣ್ಣ ಸಾಲ ಯೋಜನೆಯ (ಭಾರತ ಸ್ವಮುಕ್ತಿ ಸಂಸ್ಥೆ ಮತ್ತು / ಅಥವಾ ಬಿಎಸ್‌ಎಸ್ ಮೈಕ್ರೋಫೈನಾನ್ಸ್ ಪ್ರೈವೇಟ್ ಲಿಮಿಟೆಡ್‌ನ ಅಡಿಯಲ್ಲಿ) ಸದಸ್ಯಿನಿಯಾಗಿದ್ದೆನು/ದ್ದರು, ಹಾಗೂ ನನ್ನ ತಿಳುವಳಿಕೆ ಮತ್ತು ನಂಬಿಕೆಯ ಪ್ರಕಾರ, ನಾನು/ನಮ್ಮ ಕುಟುಂಬದ ಸದಸ್ಯಿನಿ ದಿನಾಂಕ 30ನೇ ಸೆಪ್ಟೆಂಬರ್ 2011 ಕ್ಕೂ ಮೊದಲು ಶೋಕ ನಿವಾರಣಾ ನಿಧಿ (SNN) ಮತ್ತು / ಅಥವಾ ಗ್ರಾಹಕರ ವಿಮಾ ಖಾತೆ (CIA) ಗೆ ಹಣ ಪಾವತಿ ಮಾಡಿರುತ್ತೇನೆ/ಮಾಡಿರುತ್ತಾರೆ ಎಂದು ಘೋಷಿಸುತ್ತಿದ್ದೇನೆ.

**ಯೋಜನೆಯನ್ನು ಬಿಟ್ಟಿರುವ ಸದಸ್ಯಿನಿ/ಕೋರಿಕೆದಾರರ ಹೆಸರು :** ____________ **ಸಹಿ/ಹೆಬ್ಬೆಟ್ಟಿನ ಗುರುತು:** ____________ **ದಿನಾಂಕ :** ________

## ಬಿಎಸ್‌ಎಸ್ ಕ್ಷೇತ್ರಕಛೇರಿ ಉಪಯೋಗಕ್ಕೆ ಮಾತ್ರ

ಈ ಕೆಳಗಿನ ಮಾಹಿತಿಗಳನ್ನು ಕ್ಷೇತ್ರಕಛೇರಿ ವ್ಯವಸ್ಥಾಪಕರು ಭರ್ತಿಮಾಡಬೇಕು

| | | |
|---|---|---|
| 1 | **ಕೋರಿಕೆ ಪತ್ರ ಹಾಗೂ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿದೆಯೇ?** | |
| 2 | **ಪರಿಶೀಲನೆಯ ನಂತರ, ಕೋರಿಕೆದಾರರು SNN/CIA ಹಣವನ್ನು ಪಡೆಯಲು ಅರ್ಹರಿದ್ದಾರೆಯೇ?** | |
| 3 | **ಒಂದು ವೇಳೆ ಕೋರಿಕೆದಾರರು ಅರ್ಹರಾಗಿಲ್ಲದಿದ್ದಲ್ಲಿ, ಕಾರಣ:** | |
| 4 | **ಕ್ಷೇತ್ರಕಛೇರಿ ವ್ಯವಸ್ಥಾಪಕರ ಹೆಸರು :** ____________ **ಸಹಿ ಮತ್ತು ದಿನಾಂಕ:** ____________ | |

**ಸೂಚನೆ:** ಈ ಬಿಎಸ್‌ಎಸ್ ಎನ್‌ಬಿಎಫ್‌ಸಿ ದಾಖಲೆಯು ಇಂಗ್ಲಿಷ್ ಭಾಷೆಯಲ್ಲಿ ಮತ್ತು ಬೇರೆ ಭಾಷೆಗಳಲ್ಲಿದೆ, ಹಾಗೂ ಒಂದು ವೇಳೆ ಅರ್ಥೈಸುವಿಕೆಯಲ್ಲಿ ಏನಾದರೂ ವ್ಯತ್ಯಾಸಗಳಿದ್ದಲ್ಲಿ, ಇಂಗ್ಲಿಷ್ ಪ್ರತಿ ಅನ್ವಯಿಸುತ್ತದೆ (This BSS NBFC document is in English and in other languages, and if there are differences in interpretation, English version prevails).

## ಶೋಕ ನಿವಾರಣಾ ನಿಧಿ (SNN) / ಗ್ರಾಹಕರ ವಿಮಾ ಖಾತೆ (CIA) Escrow ಖಾತೆಯಿಂದ ಹಣ ಪಡೆಯಲು, ಕೋರಿಕೆ ಪತ್ರ (Claim Form) ವನ್ನು ಭರ್ತಿ ಮಾಡಲು ಸೂಚನೆಗಳು.

## ಕೋರಿಕೆದಾರರು ಈ ಕೆಳಗಿನ ಸೂಚನೆಗಳನ್ನು ಕಡ್ಡಾಯವಾಗಿ ಓದಿ ತಿಳಿಯುವುದು ಹಾಗೂ ಅದರಂತೆ ಅನುಸರಿಸುವುದು:

1. ಕೋರಿಕೆ ಪತ್ರದಲ್ಲಿ ಕೇಳಿರುವ ಎಲ್ಲಾ ಮಾಹಿತಿಗಳನ್ನು ಕೋರಿಕೆದಾರರು ಕಡ್ಡಾಯವಾಗಿ ಭರ್ತಿಮಾಡಬೇಕು.

2. ದಿನಾಂಕ 30-09-2011 ಕ್ಕೂ ಮೊದಲು ಬಿಎಸ್ಎಸ್ ಸಣ್ಣ ಸಾಲ ಯೋಜನೆಯಲ್ಲಿ ಸದಸ್ಯಿನಿಯರಾಗಿದ್ದು, ಭಾರತ ಸ್ವಮುಕ್ತಿ ಸಂಸ್ಥೆ ಅಥವಾ ಬಿಎಸ್ಎಸ್ ಮೈಕ್ರೋಫೈನಾನ್ಸ್ ಪ್ರೈವೇಟ್ ಲಿಮಿಟೆಡ್ ("ಬಿಎಸ್ಎಸ್") ಅಡಿ ವ್ಯವಸ್ಥೆ ಮಾಡಲಾಗಿದ್ದ ಶೋಕ ನಿವಾರಣಾ ನಿಧಿ (SNN)/ ಗ್ರಾಹಕರ ವಿಮಾ ಖಾತೆ (CIA) ಗೆ ಹಣ ಪಾವತಿ ಮಾಡಿದ್ದು, ಹಾಗೂ ಆ ನಂತರ ಬಿಎಸ್ಎಸ್ ಸಣ್ಣ ಸಾಲ ಯೋಜನೆಯನ್ನು ಬಿಟ್ಟಿರುವ ಅನ್ವಯಿಸುವ ಸದಸ್ಯಿನಿಯರು ಮಾತ್ರ, ಈ ಕೋರಿಕೆ ಪತ್ರವನ್ನು ಸಲ್ಲಿಸಲು ಅರ್ಹರಾಗಿರುತ್ತಾರೆ.

3. ಈ ಮೇಲಿನಂತೆ ಹಣವನ್ನು ಪಾವತಿಸಿದ್ದ ಸದಸ್ಯಿನಿಯರು, ಸಂಬಂಧಿಸಿದ ದಾಖಲೆಗಳೊಂದಿಗೆ ಕೋರಿಕೆ ಪತ್ರವನ್ನು ಸಲ್ಲಿಸಿ, SNN Fund/CIA Escrow ಖಾತೆಯಲ್ಲಿನ ತಮ್ಮ ಪಾಲಿನ ಹಣವನ್ನು [ರೂ.77/- (ಎಪ್ಪತ್ತೇಳು ರೂ) ರವರೆಗೆ], ದಾಖಲೆಗಳ ಪರಿಶೀಲನೆಗೆ ಒಳಪಟ್ಟಂತೆ ಪಡೆಯಲು ಅರ್ಹರಾಗಿರುತ್ತಾರೆ.

4. (a) ದಿನಾಂಕ 30ನೇ ಸೆಪ್ಟೆಂಬರ್ 2011 ಕ್ಕೂ ಮೊದಲು ಬಿಎಸ್ಎಸ್ ಸಣ್ಣ ಸಾಲ ಯೋಜನೆಯ ಸದಸ್ಯಿನಿಯಾಗಿದ್ದು, ಹಾಗೂ ಶೋಕ ನಿವಾರಣಾ ನಿಧಿ (SNN) / ಗ್ರಾಹಕರ ವಿಮಾ ಖಾತೆ (CIA) ಗೆ ಮೊತ್ತವನ್ನು ಪಾವತಿ ಮಾಡಿರುವುದನ್ನು ತೋರಿಸುವ ಯಾವುದಾದರು ಒಂದು ದಾಖಲೆ (ಉದಾ: ಸಾಲದ ಮರುಪಾವತಿ ಪಾಸ್‌ಪುಸ್ತಕದ ಕಾರ್ಡ್ ಅಥವಾ ಅವರ ಗುರುತಿನ ಮಾಹಿತಿ ಮತ್ತು ಕ್ರೆಡಿಟ್ಸ್ ID ಸಂಖ್ಯೆಯನ್ನು ಹೊಂದಿರುವ ಇತರೇ ದಾಖಲೆ), ಹಾಗೂ

   (b) ಯೋಜನೆಯನ್ನು ಬಿಟ್ಟಿರುವ ಅನ್ವಯಿಸುವ ಸದಸ್ಯಿನಿಯ ಭಾವಚಿತ್ರವನ್ನೊಳಗೊಂಡ ಪ್ರಸ್ತುತ KYC (Know Your Customer) ದಾಖಲೆ (ಉದಾ: ಚುನಾವಣಾ ಗುರುತಿನ ಚೀಟಿ/ಆಧಾರ್ ಕಾರ್ಡ್, ಇತ್ಯಾದಿ) ಗಳ ಪ್ರತಿಗಳನ್ನು ಕೋರಿಕೆ ಪತ್ರದ ಜೊತೆ ಲಗತ್ತಿಸಬೇಕು. (a) ಮತ್ತು (b) ದಾಖಲೆಗಳಲ್ಲಿರುವ ಗುರುತಿನ ಮಾಹಿತಿಗಳು ಹೊಂದಾಣಿಕೆ ಆಗಬೇಕು.

5. ಒಂದು ವೇಳೆ ಯೋಜನೆಯನ್ನು ಬಿಟ್ಟಿರುವ ಅನ್ವಯಿಸುವ ಸದಸ್ಯಿನಿ ಮರಣ ಹೊಂದಿದ್ದಲ್ಲಿ, ಅವರ ಪರವಾಗಿ ಗಂಡ/ಹತ್ತಿರದ ಸಂಬಂಧಿಕರು ಕೋರಿಕೆ ಸಲ್ಲಿಸಿದ್ದಲ್ಲಿ, ಈ ಮೇಲೆ ತಿಳಿಸಿರುವ ದಾಖಲೆಗಳ ಜೊತೆಗೆ, ಈ ಕೆಳಗೆ ಸೂಚಿಸಿರುವ ದಾಖಲೆಗಳನ್ನೂ ಸಹ ಸಲ್ಲಿಸುವುದು.

   (a) ಸದಸ್ಯಿನಿಯ ಮರಣ ಪ್ರಮಾಣ ಪತ್ರ (Death Certificate) ದ ಪ್ರತಿ (b) ಕೋರಿಕೆ ಸಲ್ಲಿಸುತ್ತಿರುವ ವ್ಯಕ್ತಿಯ ಸಂಬಂಧವನ್ನು ರುಜುವಾತುಪಡಿಸುವ ದಾಖಲೆಯ ಪ್ರತಿ. (c) ಮೃತ ಸದಸ್ಯಿನಿಯ ಪರವಾಗಿ, ಕೋರಿಕೆ ಸಲ್ಲಿಸುತ್ತಿರುವ ವ್ಯಕ್ತಿಯ ಭಾವಚಿತ್ರವನ್ನೊಳಗೊಂಡ ಪ್ರಸ್ತುತ KYC ದಾಖಲೆ ಪ್ರತಿ.

6. 1ನೇ ಮಾರ್ಚ್ 2006 ಕ್ಕೂ ಮೊದಲು ಯೋಜನೆಯನ್ನು ಬಿಟ್ಟಿರುವ ಸದಸ್ಯಿನಿಯರಿಗೆ ಸಂಸ್ಥೆಯು ಕ್ರೆಡಿಟ್ಸ್ ID (Kredits ID) ಸಂಖ್ಯೆಯನ್ನು ನೀಡಿರುವುದಿಲ್ಲ. ಆದಕಾರಣ, ಅಂತಹ ಸದಸ್ಯಿನಿಯರು ಕೋರಿಕೆ ಪತ್ರವನ್ನು ಭರ್ತಿಮಾಡುವಾಗ ಕ್ರೆಡಿಟ್ಸ್ ID ಸಂಖ್ಯೆ ಎಂದು ಕೇಳಿರುವ ಜಾಗದಲ್ಲಿ **"ಅನ್ವಯಿಸುವುದಿಲ್ಲ"** ಎಂದು ಬರೆಯುವುದು.

7. ಯೋಜನೆಯನ್ನು ಬಿಟ್ಟಿರುವ ಸದಸ್ಯಿನಿಯರು/ಕೋರಿಕೆದಾರರು ತಮ್ಮ ಮಾಹಿತಿಗಾಗಿ, ಭರ್ತಿಮಾಡಿರುವ ಕೋರಿಕೆ ಪತ್ರದ ಉತ್ತಮ ಗುಣಮಟ್ಟದ ಜೆರಾಕ್ಸ್ (Xerox) ಪ್ರತಿಯನ್ನು ತಮ್ಮ ಬಳಿ ಇಟ್ಟುಕೊಳ್ಳುವುದು. ನಂತರ ಭರ್ತಿ ಮಾಡಿರುವ ಕೋರಿಕೆ ಪತ್ರದ ಮೂಲ ದಾಖಲೆಯೊಂದಿಗೆ, ಅವಶ್ಯವಿರುವ ಸಂಬಂಧಪಟ್ಟ ಇತರೇ ದಾಖಲೆಗಳ ಜೆರಾಕ್ಸ್ (Xerox) ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಸಲ್ಲಿಸಬೇಕು. ಲಗತ್ತಿಸಿರುವ ಜೆರಾಕ್ಸ್ (Xerox) ಪ್ರತಿಗಳಲ್ಲಿರುವ ಮಾಹಿತಿಗಳು ಸ್ಪಷ್ಟವಾಗಿ ಓದಲು ಸಾಧ್ಯವಾಗುವಂತಿರಬೇಕು.

8. ಭರ್ತಿಮಾಡಿರುವ ಕೋರಿಕೆ ಪತ್ರದ ಜೊತೆ ಲಗತ್ತಿಸಿರುವ ನಕಲು (Xerox) ಪ್ರತಿಗಳ ಮೂಲ ದಾಖಲೆಗಳನ್ನು (Originals ಅನ್ನು), ಯೋಜನೆಯನ್ನು ಬಿಟ್ಟಿರುವ ಸದಸ್ಯಿನಿ/ಕೋರಿಕೆದಾರರು ತಮ್ಮ ಬಳಿಯೇ ಇಟ್ಟುಕೊಳ್ಳುವುದು, ಹಾಗೂ ಅವುಗಳನ್ನು ಕೋರಿಕೆದಾರರು SNN/CIA Escrow ಖಾತೆಯಿಂದ ಅನ್ವಯಿಸುವ ಮೊತ್ತವನ್ನು ಪಡೆಯುವ ದಿನ ಕಡ್ಡಾಯವಾಗಿ ಕ್ಷೇತ್ರಕಛೇರಿ ವ್ಯವಸ್ಥಾಪಕರಿಗೆ ತೋರಿಸಬೇಕು.

9. ಯೋಜನೆಯನ್ನು ಬಿಟ್ಟಿರುವ ಅನ್ವಯಿಸುವ ಸದಸ್ಯಿನಿಯರು/ಕೋರಿಕೆದಾರರು, ಭರ್ತಿಮಾಡಿದ ಕೋರಿಕೆ ಪತ್ರ ಹಾಗೂ ಸಂಬಂಧಿಸಿದ ಇತರೇ ದಾಖಲೆಗಳನ್ನು ಮೊದಲ ಆದ್ಯತೆಯಾಗಿ ಸಂಬಂಧಿಸಿದ ಕ್ಷೇತ್ರಕಛೇರಿಗೆ/ಸಮೀಪದ ಕ್ಷೇತ್ರಕಛೇರಿಗೆ ಸಲ್ಲಿಸಬೇಕು. ಒಂದು ವೇಳೆ ಸದಸ್ಯಿನಿಗೆ ಕ್ಷೇತ್ರಕಛೇರಿಯ ವಿಳಾಸ ತಿಳಿದಿರದಿದ್ದಲ್ಲಿ ಮಾತ್ರ, ಪ್ರಧಾನ ಕಛೇರಿಯ ಈ ಕೆಳಗಿನ ವಿಳಾಸಕ್ಕೆ ಅಂಚೆ / ಕೊರಿಯರ್ ಮೂಲಕ ಸಲ್ಲಿಸಬಹುದು.

   **SNN/ CIA Escrow Claim Desk, ಬಿಎಸ್ಎಸ್ ಮೈಕ್ರೋಫೈನಾನ್ಸ್ ಪ್ರೈವೇಟ್ ಲಿಮಿಟೆಡ್, ನಂ. 11, 2ನೇ ವಿಭಾಗ, 2ನೇ ಹಂತ, ಹೊರ ವರ್ತುಲ ರಸ್ತೆ, ಬಿಡಿಎ ಕಾಂಪ್ಲೆಕ್ ಹತ್ತಿರ, ನಾಗರಭಾವಿ ಲೇಔಟ್, ಬೆಂಗಳೂರು – 560072. Tel: +91-8105273422, Fax: (91)–80–2318 8349,**
   **E-Mail ID: snn-cia-escrowclaim@bssmicrofinance.co.in. Website: www.bssmicrofinance.co.in**

10. ಕೋರಿಕೆ ಪತ್ರ ಹಾಗೂ ಇತರೇ ಅವಶ್ಯ ದಾಖಲೆಗಳನ್ನು ಸೋಮವಾರದಿಂದ – ಶುಕ್ರವಾರದವರೆಗೆ, ಮಧ್ಯಾಹ್ನ 12:00 ರಿಂದ 3:00 ಗಂಟೆ ಸಮಯದೊಳಗೆ, ಕ್ಷೇತ್ರಕಛೇರಿಗೆ ಭೇಟಿ ನೀಡಿ ಸಲ್ಲಿಸಬಹುದಾಗಿದೆ, ಸಮಯವನ್ನು ಈ ಪ್ರತಿಯನ್ನು ಮುದ್ರಿಸುವಾಗ ನಿಗದಿಪಡಿಸಲಾಗಿದೆ. ಈ ಸಮಯ ಮುಂದೆ ಬದಲಾವಣೆಯಾಗಬಹುದಾಗಿದೆ.

11. ಒಂದು ವೇಳೆ ಕೋರಿಕೆದಾರರು ಭರ್ತಿಮಾಡಿರುವ ಕೋರಿಕೆ ಪತ್ರ ಹಾಗೂ ಇತರೇ ಅವಶ್ಯ ದಾಖಲೆಗಳನ್ನು ನೇರವಾಗಿ ಪ್ರಧಾನ ಕಛೇರಿಗೆ ಸಲ್ಲಿಸಿದ್ದಲ್ಲಿ, ಅಂತಹ ದಾಖಲೆಗಳನ್ನು ಸಂಬಂಧಿಸಿದ ಕ್ಷೇತ್ರಕಛೇರಿಗೆ/ಸಮೀಪದ ಕ್ಷೇತ್ರಕಛೇರಿಗೆ ಕಳುಹಿಸಿಕೊಡಲಾಗುವುದು.

12. ಅರ್ಹ ಮೊತ್ತವನ್ನು ವಿತರಣೆಗೆ ಪರಿಗಣಿಸಲು, ಕೋರಿಕೆದಾರರು ಸಲ್ಲಿಸಿರುವ ಕೋರಿಕೆ ಪತ್ರ ಹಾಗೂ ಸಂಬಂಧಿಸಿದ ಇತರೇ ದಾಖಲೆಗಳನ್ನು ಪರಿಶೀಲಿಸಿ, ಆ ದಾಖಲೆಗಳು ತೃಪ್ತಿಕರವಾಗಿವೆಯೇ? ಅಥವಾ ತೃಪ್ತಿಕರವಾಗಿಲ್ಲವೇ? ಎಂಬುದನ್ನು ಕೋರಿಕೆ ಪತ್ರ ತಲುಪಿದ ದಿನಾಂಕದಿಂದ 30 ದಿನಗಳೊಳಗೆ ಕೋರಿಕೆದಾರರಿಗೆ ತಿಳಿಸಲಾಗುವುದು.

13. ಕೋರಿಕೆದಾರರು ಸಲ್ಲಿಸುವ, ಭರ್ತಿಮಾಡಿರುವ ಕೋರಿಕೆ ಪತ್ರ ಹಾಗೂ ಸಂಬಂಧಿಸಿದ ಇತರೇ ದಾಖಲೆಗಳನ್ನು **ಸಂಸ್ಥೆಯು ಹಿಂದಿರುಗಿಸಲು ಸಾಧ್ಯವಿಲ್ಲ.**

14. ಕೋರಿಕೆ ಪತ್ರದಲ್ಲಿರುವ ಮಾಹಿತಿಗಳು ಹಾಗೂ ಸಂಬಂಧಿಸಿದ ಇತರೇ ದಾಖಲೆಗಳು ತೃಪ್ತಿಕರವಾಗಿದ್ದಲ್ಲಿ ಮಾತ್ರ, SNN/CIA Escrow ಖಾತೆಯಿಂದ ಮೊತ್ತವನ್ನು ವಿತರಣೆ ಮಾಡಬಹುದೆಂಬುದನ್ನು ಕೋರಿಕೆದಾರರು ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು. ಕಾನೂನು ಯಾವುದಕ್ಕೆ ಅನುಮತಿಸುತ್ತದೆಯೋ, ಆ ಕಾನೂನಿನ ಚೌಕಟ್ಟಿನೊಳಗೆ ಸಂಸ್ಥೆಯು, ಯಾವಾಗಲೂ ಕಾರ್ಯ ನಿರ್ವಹಿಸಬೇಕಿರುತ್ತದೆ. ಕೋರಿಕೆ ಪತ್ರದಲ್ಲಿರುವ ಮಾಹಿತಿಗಳು ಹಾಗೂ ಸಂಬಂಧಿಸಿದ ಇತರೇ ದಾಖಲೆಗಳು ತೃಪ್ತಿಕರವಾಗಿರದಿದ್ದಲ್ಲಿ, SNN/CIA Escrow ಖಾತೆಯಿಂದ ಯಾವುದೇ ಹಣವನ್ನು ವಿತರಣೆ ಮಾಡಲು ಬಿಎಸ್ಎಸ್ ಸಂಸ್ಥೆಗೆ ಸ್ವಾತಂತ್ರ್ಯವಿರುವುದಿಲ್ಲ. ಹಾಗೆ ಮಾಡಿದ್ದಲ್ಲಿ, ಅದು ಅನ್ವಯಿಸುವ ನಿಯಮಗಳ ಉಲ್ಲಂಘನೆಯಾಗುತ್ತದೆ. ಆದ್ದರಿಂದ, ದಯವಿಟ್ಟು ಇದನ್ನು ಅರ್ಥಮಾಡಿಕೊಂಡು ಪೂರ್ಣ ಮಾಹಿತಿಗಳನ್ನು ಮತ್ತು ಸಂಬಂಧಿಸಿದ ದಾಖಲೆಗಳನ್ನು ಒದಗಿಸಿ ಸಂಸ್ಥೆಯ ಜೊತೆ ಸಹಕರಿಸಬೇಕೆಂದು ಕೋರಲಾಗುತ್ತಿದೆ. ಇದರ ಸಂಬಂಧ ನೀವು ಅರ್ಥಮಾಡಿಕೊಂಡಿರುವುದಕ್ಕೆ, ನಾವು ನಿಮಗೆ ಧನ್ಯವಾದವನ್ನು ತಿಳಿಸುತ್ತೇವೆ.

**ಸೂಚನೆ:** ಈ ಬಿಎಸ್ಎಸ್ ಎನ್‌ಬಿಎಫ್‌ಸಿ ದಾಖಲೆಯು ಇಂಗ್ಲಿಷ್ ಭಾಷೆಯಲ್ಲಿ ಮತ್ತು ಬೇರೆ ಭಾಷೆಗಳಲ್ಲಿದೆ, ಹಾಗೂ ಒಂದು ವೇಳೆ ಅರ್ಥೈಸುವಿಕೆಯಲ್ಲಿ ಏನಾದರೂ ವ್ಯತ್ಯಾಸಗಳಿದ್ದಲ್ಲಿ, ಇಂಗ್ಲಿಷ್ ಪ್ರತಿ ಅನ್ವಯಿಸುತ್ತದೆ (This BSS NBFC document is in English and in other languages, and if there are differences in interpretation, English version prevails).